# ಸಂಗೀತಾ ಭಟ್ ಹೊಸ ಹೆಜ್ಜೆ



‘ಕಮಲ್ ಶ್ರೀದೇವಿ’ ಸಿನಿಮಾದಲ್ಲಿ ಅಭಿನಯಿಸಿರುವ ನಟಿ ಸಂಗೀತಾ ಭಟ್, ವಿಭಿನ್ನ ಪಾತ್ರವೊಂದರಲ್ಲಿ ತಾವು ಕಾಣಿಸಿಕೊಳ್ಳುತ್ತಿರುವುದಾಗಿ ಹೇಳಿದ್ದಾರೆ. ಸಿನಿಮಾದಲ್ಲಿ ಸಂಗೀತಾ, ಲೈಂಗಿಕ ಕಾರ್ಯಕರ್ತೆಯ ಪಾತ್ರ ನಿರ್ವಹಿಸಿದ್ದು, ಆ ಪಾತ್ರ ಸಿನಿಮಾದ ಜೀವಾಳ ಎಂದಿದ್ದಾರೆ.

ಸಿನಿಮಾ ಬಗ್ಗೆ ಮಾಹಿತಿ ಹಂಚಿಕೊಂಡಿರುವ ಅವರು, ‘‘ಕಮಲ್ ಶ್ರೀದೇವಿ’ ಒಂದು ಹೆಣ್ಣಿನ ಸುತ್ತಲ ಕಥೆ. ಕಮಲ್ ಶ್ರೀದೇವಿ ಎನ್ನುವುದು ಎರಡು ಪಾತ್ರ. ಭೂಮಿ ತುಂಬಾ ಚಿಕ್ಕದು ಹಾಗೂ ದುಂಡಗಿದೆ ಎಂದು ಹೇಳುತ್ತಾರೆ. ಇಲ್ಲಿ ಯಾರು ಹೇಗೆ ಒಬ್ಬರನ್ನೊಬ್ಬರು ಸಂಧಿಸುತ್ತಾರೆ, ಯಾವ ಒಂದು ವಿಷಯ ಅವರನ್ನು ಒಂದುಗೂಡಿಸುತ್ತೆ, ಅಲ್ಲಿಂದ ಹೇಗೆ ಅವರ ಪಯಣ ಆರಂಭವಾಗುತ್ತದೆ, ಎಲ್ಲಿಗೆ ಹೋಗುತ್ತದೆ... ಹೀಗೆ ಜೀವನದ ಏರುಪೇರಿನ ಪಯಣವನ್ನು ಸಿನಿಮಾ ಬಿಂಬಿಸುತ್ತದೆ’’ ಎಂದು ತಿಳಿಸಿದ್ದಾರೆ.

‘ಈ ಪಾತ್ರದ ಬಗ್ಗೆ ಕೇಳುತ್ತಿದ್ದಂತೆ ಇದನ್ನು ಮಾಡಲೇಬೇಕು ಎಂಬ ಹುಚ್ಚು ಹತ್ತಿತು. ವಿ.ಎ. ಸುನೀಲ್ ಕುಮಾರ್ ಅವರ ನಿರ್ದೇಶನ ಎಂದಾಕ್ಷಣ ಉತ್ಸಾಹ ಹೆಚ್ಚಾಯಿತು. ಈ ಪಾತ್ರ ರಿಸ್ಕ್‌ನದ್ದೇ. ಆದರೆ ವೃತ್ತಿಪರತೆ ಮೀರಿಲ್ಲ. ಎಲ್ಲಿಯೂ ಮುಜುಗರ ಮೂಡಿಸದಂತೆ ನಿಭಾಯಿಸಿದ್ದೇನೆ’ ಎಂದು ವಿವರಿಸಿದ್ದಾರೆ.

ಇದೇ ಸೆಪ್ಟೆಂಬರ್ 19ಕ್ಕೆ ಸಿನಿಮಾ ಬಿಡುಗಡೆಯಾಗಲಿದ್ದು, ಮಿತ್ರ, ಕಿಶೋರ್, ರಮೇಶ್ ಇಂದಿರಾ, ಸಚಿನ್ ಚಲುವರಾಯಸ್ವಾಮಿ ಅವರ ತಾರಾಬಳಗ ಸಿನಿಮಾಗೆ ಹುರುಪು ತುಂಬಿದೆ.



# ಅರ್ಚನಾ ಕಾಮಿಡಿ ಕನವರಿಕೆ

ಈಚೆಗೆ ಬಿಡುಗಡೆಯಾದ ‘ಎಕ್ಕ’ ಸಿನಿಮಾ ನಟನೆಯಿಂದ ಮೆಚ್ಚುಗೆ ಗಳಿಸಿದ, ‘ಅಯ್ಯನ ಮನೆ’ ವೆಬ್‌ಸೀರೀಸ್ ಮೂಲಕ ಹೊಸ ಮಾಧ್ಯಮ ಪ್ರವೇಶಿಸಿರುವ ನಟಿ ಅರ್ಚನಾ ಕೊಟ್ಟಿಗೆ, ಇದೀಗ ‘ಮಾರ್ಕ್’ ಸಿನಿಮಾ ಬಳಗ ಸೇರಿದ್ದಾರೆ.

ಕಿಚ್ಚ ಸುದೀಪ್ ಅಭಿನಯದ ‘ಮಾರ್ಕ್’ ಸಿನಿಮಾ ಶೀರ್ಷಿಕೆ ಈಚೆಗೆ ಅನಾವರಣಗೊಂಡಿದ್ದು, ಅರ್ಚನಾ ಕೊಟ್ಟಿಗೆ ಕೂಡ ಸಿನಿಮಾ ಭಾಗವಾಗಿದ್ದಾರೆ. ಸುದೀಪ್ ಅವರ ಸಿನಿಮಾದಲ್ಲಿ ಅಭಿನಯಿಸುತ್ತಿರುವುದು ತಮ್ಮಲ್ಲಿ ಉತ್ಸಾಹ ತುಂಬಿರುವುದಾಗಿ ಹೇಳಿದ್ದಾರೆ.

ಇದೇ ಸಂದರ್ಭದಲ್ಲಿ ತಮ್ಮ ಪಾತ್ರಾಭಿಲಾಷೆಯನ್ನು ಹಂಚಿಕೊಂಡಿರುವ ಅವರು, ‘ನನಗೆ ಹೀರೊಯಿನ್ ಎಂದು ಕರೆಸಿಕೊಳ್ಳುವುದು ಬೇಡ. ಪ್ರೇಕ್ಷಕರ ಮೇಲೆ ಪರಿಣಾಮ ಬೀರುವಂಥ ಪಾತ್ರ, ಅದು ಕೆಲವೇ ಅವಧಿ ಬಂದು ಹೋಗುವಂಥದ್ದಾದರೂ ಸರಿ, ಅದನ್ನು ನಿರ್ವಹಿಸಲು ಇಷ್ಟಪಡುತ್ತೇನೆ’ ಎಂದು ಹೇಳಿದ್ದಾರೆ.

‘ಶೇ. 90ರಷ್ಟು ಪ್ರೇಕ್ಷಕರು ಹೀರೊಯಿನ್ ಎಂದರೆ ಹೀಗೇ ಇರಬೇಕು ಎಂಬ ಪರಿಕಲ್ಪನೆ ಹೊಂದಿದ್ದಾರೆ. ಆದರೆ ಆ ಪರಿಕಲ್ಪನೆಯನ್ನು ದಾಟಿ ಪರ್ಫಾರ್ಮೆನ್ಸ್ ಎನ್ನುವುದು ಅವರನ್ನು ಹಿಡಿದಿಡಬೇಕಿದೆ. ನಟನೆ, ದೇಹ ರಚನೆಗಿಂತ ಮುಖ್ಯವಾಗಬೇಕು ಎನ್ನುವುದು ನನ್ನ ಅಭಿಪ್ರಾಯ. ಜನರು ನನ್ನ ಕೆಲಸದಿಂದ ನನ್ನನ್ನು ಗುರುತಿಸಬೇಕು’ ಎಂದು ವಿವರಿಸಿದ್ದಾರೆ.

ಅರ್ಚನಾ ಕೊಟ್ಟಿಗೆ ಅವರಿಗೆ ಕಾಮಿಡಿ ಎಂದರೆ ಬಲು ಇಷ್ಟವಂತೆ. ‘ಕಾಮಿಡಿ ಜಾನರ್ ನನಗೆ ಬಹಳ ಇಷ್ಟ. ಊರ್ವಶಿ, ಉಮಾಶ್ರೀ ಹಾಗೂ ಶ್ರುತಿ ಅವರಂತೆ ಕಾಮಿಡಿ ಪಾತ್ರಗಳನ್ನು ಮಾಡಬೇಕು ಎನ್ನುವ ಆಸೆಯಿದೆ’ ಎನ್ನುತ್ತಲೇ, ಕನ್ನಡದ ‘ರಾಮಾ ಶಾಮಾ ಭಾಮಾ’ ಸಿನಿಮಾವನ್ನು ಉದಾಹರಿಸಿದ್ದಾರೆ.

‘ಗ್ಲಾಮರ್ ಇಲ್ಲದೆ, ಬರೀ ಕಾಮಿಡಿಯಿಂದ ಗೆದ್ದ ಸಿನಿಮಾ ಅದು. ಕಾಮಿಡಿ ಜಾನರ್ ಅನ್ನು ಎಕ್ಸ್‌ಪ್ಲೋರ್ ಮಾಡಬೇಕಿದೆ’ ಎಂದು ತಮ್ಮ ಬಯಕೆ ವ್ಯಕ್ತಪಡಿಸಿದ್ದಾರೆ. ‘ಅಯ್ಯನ ಮನೆ’ ಕುರಿತು ಮಾತು ಹಂಚಿಕೊಂಡಿರುವ ಅವರು, ‘ಜನರು ನನ್ನನ್ನು ಗುರುತಿಸಲು ಆರಂಭಿಸಿದ್ದಾರೆ. ಒಟಿಟಿಯಿಂದ ಹೆಚ್ಚು ಜನರನ್ನು ತಲುಪಲು ಸಾಧ್ಯವಾಗಿದೆ’ ಎಂದು ಸಂತಸ ಹಂಚಿಕೊಂಡಿದ್ದಾರೆ.